ಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆಯಿಂದ ಪರಿಸರ ಮಾಲಿನ್ಯ.

೮೦-ಶ್ರೀ ಕೆ.ಎಸ್. ನಾಗೇಗೌಡ (ಕಿರುಗಾವಲು) ಮಾನ್ಯ ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮದ್ದೂರು ತಾಲ್ಲೂಕಿನಲ್ಲಿರುವ ಚಾಮುಂಡೇಶ್ವರಿ ಸಕ್ಕೆರೆ ಕಾರ್ಖಾನೆಯಿಂದ ಬಿಡುವ ರಸಾಯನದಿಂದ ಅನೇಕ ಹಳ್ಳಿಗರ ಪರಿಸರ ಮಾಲಿನ್ಯವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದರೆ, ಈ ಬಗ್ಗೆ ಪರಿಸರ ಮಾಲಿನ್ಯ ನಿವಾರಿಸಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು,

ಇ) ರಾಜ್ಯದಲ್ಲಿ ಎಷ್ಟು ಸಕ್ಕರೆ ಕಾರ್ಖಾನೆಗಳಿಂದ ಈ ರೀತಿಯ ಪರಿಸರ ಮಾಲಿನ್ಯವಾಗುತ್ತಿದೆ?

ಶ್ರೀ ಪಿ.ಸಿ. ಸಿದ್ದನಗೌಡರು (ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ರಾಜ್ಯ ಸಚಿವರು).

ಅ) ಮದ್ದೂರು ತಾಲ್ಲೂಕಿನಲ್ಲಿರುವ ಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆಯು ಕಲುಷಿತ ನೀರನ್ನು ಶುದ್ದೀಕರಿಸಲು ಸಂಸ್ಕರಣ ಘಟಕಗಳನ್ನು ಅಳವಡಿಸಿದ್ದು, ಶುದ್ಧಿಕರಿಸಲ್ಪಟ್ಟ ನೀರನ್ನು ಉದ್ದಿಮೆಯ ೧೪ ಎಕೆರೆ ಜಮೀನಿನಲ್ಲಿ ಹಾಗೂ ಸುತ್ತಮುತ್ತಲಿನ ರೈತರ ಜಮೀನಿನಲ್ಲಿ ವ್ಯವಸಾಯಕ್ಕೆ ಉಪಯೋಗಿಸಲಾಗುತ್ತಿದೆ. ಪರಿಸರ ಮಾಲಿನ್ಯ ಕಾಯ್ದೆಯಡಿಯಲ್ಲಿ ನಿರ್ಧರಿಸಲಾದ ಮಿತಿಗೆ ಮೀರಿದ್ದಲ್ಲಿ ಸೂಕ್ತ ಕ್ರಮ ತೆಗೆದು ಕೊಳ್ಳಲಾಗುವುದು.

ಆ) ರಾಜ್ಯದಲ್ಲಿ ಒಟ್ಟು ೩೦ ಸಕ್ಕರೆ ಕಾರ್ಖಾನೆಗಳಿದ್ದು, ಬಹುತೇಕ ಕಾರ್ಖಾನೆಗಳು ಮಾಲಿನ್ಯ ನಿಯಂತ್ರಣ ಕ್ರಮಗಳನ್ನು ಕೈಗೊಂಡಿದೆ.

ಇ) ಮಂಡ್ಯದಲ್ಲಿರುವ ಮೈಸೂರು ಸಕ್ಕರೆ ಕಾರ್ಖಾನೆ ಚಿಮಣಿಗಳಿಂದ ಹೊರಬರುತ್ತಿರುವ ಕಪ್ಪು ಬೂದಿಯಿಂದ ನಗರವಾಸಿಗಳಿಗೆ ತೊಂದರೆ ಉಂಟಾಗುತ್ತಿದೆ. ಕಾರ್ಖಾನೆಯು ಅಳವಡಿಸಿರುವ ವಾಯು ಮಾಲಿನ್ಯ ಉಪಕರಣಗಳನ್ನು ಇನ್ನೂ ಉತ್ತಮಗೊಳಿಸಬೇಕಾಗಿದೆ.

ರಾಜ್ಯದಲ್ಲಿರುವ ಅಂಗನವಾಡಿಗಳಲ್ಲಿ ದುರುಪಯೋಗ.

೩೮-ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

೧) ರಾಜ್ಯದಲ್ಲಿರುವ ಅಂಗನವಾಡಿಗಳಲ್ಲಿ ಸಾಕಷ್ಟು ದುರುಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

೨) ಅಂಗನವಾಡಿಗಳಿಗೆ ಸರಬರಾಜು ಮಾಡುವ ಸಾಮಗ್ರಿಗಳನ್ನು ಖರೀದಿಸುವ ವಿಧಾನವೇನು?

ಶ್ರೀಮತಿ ಬಿ.ಟಿ. ಲಲಿತಾನಾಯಕ್ (ಮಹಿಳಾ ಮತ್ತುಮಕ್ಕಳ ಅಭಿವೃದ್ಧಿ ಸಚಿವರು).

೧) ನಿರ್ದಿಷ್ಟವಾದ ದೂರುಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

೨) ಸಮಗ್ರ ಬಾಲವಿಕಾಸ ಯೋಜನಾಧಿಕಾರಿಗಳ ಮತ್ತು ಸಹಾಯಕ ನಿರ್ದೇಶಕರ ಪ್ರಸ್ತಾವನೆಯ ಮೇಲೆ ಜಿಲ್ಲಾ ಪಂಚಾಯತ್‌ಗಳು ಅಂಗನವಾಡಿ ಕೇಂದ್ರಗಳಿಗೆ ಬೇಕಾದ ಸಾಮಗ್ರಿಗಳನ್ನು ಖರೀದಿಸಿರುತ್ತಾರೆ. ಅಂಗನವಾಡಿ ಕೇಂದ್ರಗಳಿಗೆ ಅಗತ್ಯವಿರುವ ಆಹಾರ ಸಾಮಗ್ರಿಗಳನ್ನು ಸರ್ಕಾರದ ಆದೇಶದಂತೆ ಈ ಕೆಳಕಂಡ ಸಂಸ್ಥೆಗಳಿಂದ ಖರೀದಿಸಬೇಕೆಂಬ ನಿಯಮವಿದೆ.

೧) ಕರ್ನಾಟಕ ಕೋಆಪರೇಟಿವ್ ಕನಸ್ಯೂಮರ್ಸ ಫೆಡರೇಷನ್ (ಕೆಸಿಸಿಎಫ್)

೨) ಮಹಿಳಾ ವಿವಿಧೋದ್ದೇಶ ಸಹಕಾರ ಸಂಘ

೩) ನ್ಯಾಶನಲ್ ಕೋಆಪರೇಟಿವ್ ಕನ್ಸೂಮರ್ಸ್ ಫೇಡರೇಷನ್ ಆಫ್ ಇಂಡಿಯ (ಎನ್ ಸಿಸಿಎಫ್)

೪) ಜಿಲ್ಲಾ ಮಹಿಳಾ ವಿವಿಧೋದ್ದೇಶ ಸಹಕಾರ ಸಂಘ

೫) ಲ್ಯಾಂಪ್ ಸೊಸೈಟಿಗಳು

ಲೇಖನ ಸಾಮಗ್ರಿಗಳನ್ನು ಮೈಸೂರು ಸೇಲ್ಸ್ ಇಂಟರನ್ಯಾಶನಲ್ ನಿಯಮಿತ ಇವರಿಂದ ಖರೀದಿಸಲಾಗುವುದು ಹಾಗೂ ಫೀಠೋಪಕರಣಗಳನ್ನು ಕರ್ನಾಟಕ ಸರ್ಕಾರದಿಂದ ಅಂಗಿಕರಿಸಲ್ಪಟ್ಟಿರುವ ಕೆ.ಎಸ್.ಐ.ಎಂ.ಸಿ. (ಸಣ್ಣ ಕೈಗಾರಿಕೆಗಳ ಮಾರುಕಟ್ಟೆ ನಿಗಮ ನಿಯಮಿತ) ಇವರಿಂದ ಖರೀದಿಸಲಾಗುವುದು. ಈ ಎಲ್ಲಾ ಖರೀದಿಗೆ ಸಂಬಂಧಿತ ಜಿಲ್ಲಾ ಪಂಚಾಯತ್ ಮಂಜೂರಾತಿ ನೀಡುತ್ತದೆ.

Nomination to the different Academics

706- Sri.Quamarul Islam (Gulbarga) will be Hon'ble Minister of State for Women & Child Development and Kannada & Culture Department be pleased to State.

(a) *Persons nominated and co-opted in different Academies (Details may be furnished),*

(b) *Is it not a fact that the adequate representation was not given to the talented persons of Hydera bad Karnataka area in these academies,*

(c) *If so, whether the Government would nominate talented persons from thisarea to different academies to remove the injustice done to them?*